

# ಮಚಿ

■ ಪಿ.ಬಿ. ಪ್ರಸನ್ನ
ಚಿತ್ರ: ಈಶ್ವರ ಬಡಿಗೇರ

‘ಎಷ್ಟು ಗಂಟೆಗೆ ಕ್ಯಾಂಟೀನ್ ಓಪನ್? ಹಸಿವು ತಡ್ಕೊಳ್ಳಿಕ್ಕೆ ಆಗ್ತಾ ಇಲ್ಲ ಮಾರ್ರೆ’ ಎಂದು ನಿಟ್ಟುಸಿರು ಬಿಟ್ಟು ಪಕ್ಕದವನ ಹತ್ರ ವಾದಿರಾಜ ಕೇಳಿದ. ಅವ ಸಣ್ಣಕ್ಕೆ ಸ್ವಾಸ ಬಿಟ್ಟ. ‘ಯಾವಾಗ್ಲೂ ಏಳೂವರೆಗೆ ಓಪನ್ ಆಗ್ತಾ ಇತ್ತು. ಇವತ್ತು ಏಳೂ ಮುಕ್ಕಾಲಾದ್ರೂ ತೆಗೀಲಿಲ್ಲ’. ನೆಲ ನೋಡುತ್ತ ಯಾವುದೇ ಭಾವನೆ ಇಲ್ಲದವನಂತೆ ಹೇಳಿದ. ‘ಅಡುಗೆ ಮಾಡ್ತಾ ಇದ್ದಾರೆ. ಸಾಂಬಾರಿದ್ದು ಪರಿಮಳ ಮೂಗಿಗೆ ಬಡ್ದು ಹಸಿವು ಮತ್ತೆ ಸಾ ಜಾಸ್ತಿ ಮಾಡ್ತಾ ಉಂಟು. ಒಗ್ಗರಣೆದ್ದು ಪರಿಮಳ ಕೇಳಿದ್ರೆ ಅಂತೂ ಹೇಳುದೇ ಬೇಡ. ಬಾಯಲ್ಲಿ ಚವುಳಿ ನೀರು ಈಚೆ ಬಂದು ಎಷ್ಟು ಹೊತ್ತಿಗೆ ತಿಂಡಿ ಹೊಟ್ಟೆಗೆ ಬೀಳ್ತದಾ ಅಂತ ಆಗ್ತದೆ ಮಾರ್ರೆ. ಯೆಂತ ಮಾಡುದು? ಈ ಮಾರಿ ಕೊರೊನಾ ಅಂತ ಒಂದು ಸೀಕು ದರಿದ್ರ ಚೀನಾದಿಂದ ಯೆಂತಕ್ಕಾದ್ರೂ ಬಂತಾ ಏನ. ಬದುಕು ಹೀಗೆ ಬೇಡಿಕೊಂಡು ತಿನ್ನುವ ಹಾಗೆ ಆಯ್ತು ಷ್ಯಕ್” ಅಂತ ಹೇಳಿ ವಾದಿರಾಜ ಕಣ್ಣಲ್ಲಿ ನೀರು ತುಂಬಿಕೊಂಡು ಹೇಳಿ ಪಕ್ಕದವನ ಮುಖ ನೋಡಿದ, ಅವನ ಕಣ್ಣಿಂದ ಸಾ ನೀರು ಬಂತು.

‘ನಿಮ್ಮದು ಯಾವ ಊರು?’ ಆ ವ್ಯಕ್ತಿ ಕ್ಯೂನಲ್ಲಿ ದೂರ ನಿಂತಿದ್ದವ ಹತ್ತಿರ ಬಂದು ಕೇಳಿದ.

‘ನನ್ನದು ಇದೇ ಊರು. ಸ್ವಲ್ಪ ದೂರ... ಒಂದು ಹಳ್ಳಿ’ ವಾದಿರಾಜ ಹೇಳಲು ಇಷ್ಟ ಇಲ್ಲದವನಂತೆ ಎಂಥೆಂಥದೋ ಬಡಬಡಿಸಿದ.

‘ದೂರ?... ಹಳ್ಳಿ! ಅಂದ್ರೆ? ಊರಿಗೊಂದು ಹೆಸರು ಇಲ್ಲವಾ?’ ಆ ವ್ಯಕ್ತಿ ಕ್ಯೂ ಬಿಟ್ಟು ಅವನ ಹತ್ತಿರವೇ ಮಾತಾಡ್ಲಿಕ್ಕೆ ಅಂತ ಬಂದು ನಿಂತ. ಆತನಕ ನಿಂತು ನಿಂತು ಕಾಲು ಬಚ್ಚಿದ್ದ ವಾದಿರಾಜ ಅಲ್ಲಿಯೇ ಕುಸಿದು ಕೂತ. ಯೆಂತಕ್ಕಾ ಏನ ಕಿರಿಕಿರಿ ಆಯ್ತು ಅವನಿಗೆ. ಇವ ಮೆದುಳಿಗೇ ಕೈ ಹಾಕ್ತಾನೆ. ತಾನು ಯಾವ ಊರಿನವನಾದ್ರೆ ಇವನಿಗೇನು? ಅವನು ಸಾ ಬಂದದ್ದು ಧರ್ಮದ ತಿಂಡಿ ಊಟಕ್ಕೆ, ತಾನು ಸಾ ಅದಕ್ಕೇ. ಮುಖ ಕಾಣದೆ ಇರುವ ಹಾಗೆ ಮಾಸ್ಕ್ ಹಾಕಿಕೊಂಡದ್ದು ಒಂದು ದೊಡ್ಡ ಉಪಕಾರ ಅನಿಸಿತು ಅವನಿಗೆ. ಮಾತ್ರ ಅಲ್ಲ ತನ್ನ ತಲೆ ಸಾ ಕಾಣ್ಬಾರ್ದು ಅಂತ ಒಂದು ದೊಡ್ಡ ಮುಂಡಾಸು ಸುತ್ತಿಕೊಂಡೇ ಇದ್ದ. ಕಣ್ಣು ಮಾತ್ರ ಪಿಳಿಪಿಳಿ